ಫಲಶ್ರುತಿಯಲ್ಲಿ ವಾಲ್ಮೀಕಿ ಮಹರ್ಷಿಗಳು –

**ಚಿಂತಯೇದ್ರಾಘವಂ ನಿತ್ಯಂ ಶ್ರೇಯಃ ಪ್ರಾಪ್ತುಂ ಯ ಇಚ್ಛತಿ ।**

''ತಮ್ಮ ಜೀವಿತದಲ್ಲಿ ಯಾರು ಶ್ರೇಯಸ್ಸನ್ನು ಬಯಸುವರೋ ಅವರು ನಿತ್ಯ ನಿರಂತರ ರಾಮನಾಮ ಭಜಿಸಬೇಕು. ''

**ನ ದೇಶಕಾಲನಿಯಮಃ ಶೌಚಾಶೌಚವಿನಿರ್ಣಯಃ ।**
**ಪರಂ ಸಂಕೀರ್ತನಾದೇವ ರಾಮ ರಾಮೇತಿ ಮುಚ್ಯತೇ ॥**

''ರಾಮ ನಾಮ ಜಪಿಸಲು ದೇಶ, ಕಾಲ, ನಿಯಮ, ಅಶೌಚ ಇದಾವುದೂ ಆತಂಕವಲ್ಲ. ವರ್ಣಾಶ್ರಮ ಲಿಂಗಾದಿ ನಿಯಮಗಳೂ ಇಲ್ಲ, ರಾಮನಾಮದ ಉಚ್ಚಾರಣೆಯೇ ಅವನನ್ನು ಶುದ್ಧಗೊಳಿಸಿ ಬಿಡುತ್ತದೆ ಎಂಬುದು ಋಷಿ ವಾಕ್ಯ.''

ಇದಕ್ಕೆ ಪೂರಕವಾದ ಇನ್ನೊಂದು ಪ್ರಚಲಿತವಾದ ವಾಕ್ಯ –

**ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂಗತೋಽಪಿವಾ ।**
**ಯಃ ಸ್ಮರೇತ್ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ ॥**

''ವ್ಯಕ್ತಿ ತಾನು ಎಷ್ಟೇ ಅಪವಿತ್ರ ಸ್ಥಿತಿಯಲ್ಲಿದ್ದರೂ ಭಗವಂತನ ನಾಮ ಸ್ಮರಿಸಿದ ಕೂಡಲೇ ತ್ರಿಕರಣ ಶುದ್ಧಿಯನ್ನು ಹೊಂದುತ್ತಾನೆ. ಭಗವಂತನ ನಾಮ ಎಷ್ಟು ಸರಳವೆಂದರೆ ''ನಾರಾಯಣ'' ಎಂಬ ಹೆಸರಿನ ಪದಗಳೇ ಪಾಪಶುದ್ಧಿಗೆ ಸಾಕು. ಆ ಪದಗೊಳಡನೆ 'ನಮಃ' 'ಭಜಾಮಿ' ಇತ್ಯಾದಿ ಕ್ರಿಯಾಪದಗಳನ್ನು ಜೋಡಿಸುವ ಆವಶ್ಯಕತೆಯೂ ಇಲ್ಲ.

**ಆಶ್ಚರ್ಯೇ ವಾ ಭಯೇ ಶೋಕೇ ಕ್ಷತೇ ವಾ ಮಮ ನಾಮ ಯಃ ।**
**ವ್ಯಾಜೇನ ವಾ ಸ್ಮರೇದ್ಯಸ್ತು ಸ ಯಾತಿ ಪರಮಾಂ ಗತಿಮ್ ॥**

*(ಪದ್ಮ ಪುರಾಣ)*

''ಭಗವನ್ನಾಮದ ಕೀರ್ತನೆಯಿಂದ ಮಾತ್ರವಲ್ಲದೇ ಶ್ರವಣ ಸ್ಮರಣಗಳಿಂದಲೂ ಅದೇ ಮಹಾಫಲವು ದೊರೆಯುವುದು. ''ಏಕದಾಪಿ ಸಕೃದುಚ್ಚರಿತಂ'' ಎಂಬಂತೆ ದಿವ್ಯನಾಮವನ್ನು ಒಂದು ಬಾರಿ ಉಚ್ಚರಿಸಿದರೂ ಪಾಪ ಪರಿಹಾರವಾಗುವುದು. ಹೀಗಿರುವಾಗ ಮತ್ತೆ ಮತ್ತೆ ನಾಮಸಂಕೀರ್ತನೆಯನ್ನು ಏಕೆ ಮಾಡಬೇಕೆಂದರೆ, ಮುಂದೆ ಪಾಪಗಳು ಉಂಟಾಗದಿರಲೆಂದು.''

**ವರ್ತಮಾನಂ ಚ ಯತ್ಪಾಪಂ ಯದ್ ಭೂತಂ ಯದ್ಭವಿಷ್ಯತಿ ।**
**ತತ್‌ಸರ್ವಂ ನಿರ್ದಹತ್ಯಾಶು ಗೋವಿಂದಾಮಲ ಕೀರ್ತನಮ್॥**

''ಸ್ವಾಮಿಯ ನಾಮವನ್ನು ಉಚ್ಚರಿಸುವುದರಿಂದ ಮೂರೂ ಕಾಲಗಳ ಎಲ್ಲ ಪಾಪಗಳು ತೊಳೆದು ಹೋಗುವುವು.''

ಅಗಸ್ತ್ಯ ಮಹರ್ಷಿಗಳ ನುಡಿ –

**ನಾರಾಯಣೋ ನಾಮ ನರೋ ನರಾಣಾಂ**
**ಪ್ರಸಿದ್ಧ ಚೋರಃ ಕಥಿತಃ ಪೃಥಿವ್ಯಾಂ**
**ಅನೇಕ ಜನ್ಮಾರ್ಜಿತ ಪಾಪ ಸಂಚಯಂ**
**ಹರತ್ಯಶೇಷಃ ಸ್ಮೃತಮಾತ್ರ ಏವ ॥**

''ನಾರಾಯಣನೆಂದು ಕರೆಯಲ್ಪಡುವವನು ಭೂಲೋಕದಲ್ಲಿ ಹೆಸರುವಾಸಿಯಾದ ಕಳ್ಳನೆಂದು ಜ್ಞಾನಿಗಳು ಹೇಳುತ್ತಾರೆ. ಏಕೆಂದರೆ ಜನರು ಅನೇಕ ಜನ್ಮಗಳಲ್ಲಿ ಸಂಗ್ರಹಿಸಿದ ಪಾಪರಾಶಿಯನ್ನು ಕೇವಲ ಅವನ ಸ್ಮರಣೆಯಿಂದಲೇ ಸಂಪೂರ್ಣವಾಗಿ ಅಪಹರಿಸುತ್ತಾನೆ. (ನಾಶ ಮಾಡುತ್ತಾನೆ.)''

**ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ ।**
**ಪುಮಾನ್ವಿಮುಚ್ಯತೇ ಸದ್ಯಃ ಸಿಂಹತ್ರಸ್ತಮೃಗೈರಿವ ॥**

''ಸಿಂಹಗರ್ಜನೆಗೆ ಹೆದರಿ ಮೃಗಗಳು ಓಡಿ ಹೋಗುವಂತೆ ತಿಳಿದೋ ತಿಳಿಯದೆಯೋ ಹರಿನಾಮ ಸಂಕೀರ್ತನೆ ಮಾಡಲು ಮಾನವರ ಪಾಪರಾಶಿಗಳು ಓಡಿ ಹೋಗುವುವು.''

ಬ್ರಹ್ಮದೇವರ ನುಡಿ –

**ನಾರಾಯಣೇತಿ ಮಂತ್ರೋಽಸ್ತಿ ವಾಗಸ್ತಿ ವಶವರ್ತಿನೀ ।**
**ತಥಾಽಪಿ ನರಕೇ ಘೋರೇ ಪತಂತೀತ್ಯೇತದದ್ಭುತಮ್॥**

''ನರಕವನ್ನು ತಪ್ಪಿಸುವ ಜಪಿಸಲು ಸುಲಭವಾದ ನಾರಾಯಣ ಮಂತ್ರವಿದೆ. ನಾಲಿಗೆ ನಮ್ಮ ಅಧೀನದಲ್ಲಿದೆ ಹೀಗಿದ್ದರೂ ಜನರು ಪವಿತ್ರನಾಮ ಜಪಿಸದೇ ಅತಿ ದುಸ್ಸಹವಾದ ನರಕದಲ್ಲಿ ಬೀಳುವುದೆಂತ ಆಶ್ಚರ್ಯ!''

ಭಗವಾನ್ ವೇದವ್ಯಾಸರ ನುಡಿ –

**ಅಚ್ಯುತಾನಂತ ಗೋವಿಂದ ನಾಮೋಚ್ಚಾರಣ ಭೀಷಿತಾಃ ।**
**ನಶ್ಯಂತಿ ಸಕಲಾಃ ರೋಗಾಃ ಸತ್ಯಂಸತ್ಯಂ ವದಾಮ್ಯಹಂ**

''ಅಚ್ಯುತ, ಅನಂತ, ಗೋವಿಂದ, ಎಂಬ ನಾಮ ಸಂಕೀರ್ತನೆಯಿಂದ ಹೆದರಿದ ಎಲ್ಲಾ ರೋಗಗಳು ದೂರವಾಗುವುವು. ಇದು ಸತ್ಯ. ನಾನು ಸತ್ಯವಾದುದನ್ನೇ ಹೇಳುತ್ತಿದ್ದೇನೆ.

**ಸತಾಮಪಿ ನಾಮೋಚ್ಚಾರಣಾದೇಃ ಭಗವನ್ನಾಮವತ್ ।**
**ಅಘನಿರ್ವರ್ತಕ ತ್ವಾದಿತಿಭಾವಃ ।** *(ವೀರರಾಘವೀಯ)*

''ಭಗವನ್ನಾಮೋಚ್ಚಾರಣೆಯು ಹೇಗೋ ಹಾಗೆ ಭಗವದ್ ಭಕ್ತರಾದ ಮಹಾತ್ಮರ ನಾಮೋಚ್ಚಾರಣೆಯನ್ನು ಉಚ್ಚರಿಸುವುವವರ ಪಾಪಗಳನ್ನು ಕಳೆಯುತ್ತದೆ.''

ಇದರ ಸಂದೇಶದಂತೆ ಭಗವದ್ ಕಾರ್ಯಕ್ಕಾಗಿಯೇ ಅವತರಿಸಿದ ದಿವ್ಯತ್ರಯರಾದ ಶ್ರೀರಾಮಕೃಷ್ಣ ಪರಮಹಂಸರು, ಶ್ರೀಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ನಾಮಸಂಕೀರ್ತನೆ ಗುಣಗಾನ ಮಾಡಿದಾಗಲೂ ಅದೇ ಫಲವು ನಮಗೆ ಲಭಿಸುವುದು.

ಶ್ರೀ ರಾಮಕೃಷ್ಣರ ಆದೇಶದಂತೆ ಭಗವದ್ ಭಕ್ತನು ಪಾಪನಾಶದ ಕಡೆಗೆ ಹೆಚ್ಚು ಗಮನ ಕೊಡದೆ ಭಕ್ತಿ ಭಾವವು ದೃಢವಾಗಲಿ, ಭಗವದ್ ಪ್ರೇಮವು ಹೆಚ್ಚುತ್ತಿರಲಿ, ಭಗವಂತನ ದಿವ್ಯ ಸನ್ನಿಧಾನದಲ್ಲೇ ತನ್ನ ಮನಸ್ಸು ಸುಳಿದಾಡುತ್ತಿರಲೆಂಬ ಆಶಯದಿಂದಲೇ ಹೆಚ್ಚು ಹೆಚ್ಚಾಗಿ ಅವನ ಮಧುರವಾದ ನಾಮಗಳನ್ನು ಉಚ್ಚರಿಸುತ್ತಿರಬೇಕು.

ಎಲ್ಲರೂ ಮುಕ್ತಿಯನ್ನು ಅರಸುತ್ತಾರೆ. ಮುಕ್ತಿ ಭಕ್ತಿಯ ದಾಸಿ. ಭಗವಂತನ ನಾಮವೇ ಭಕ್ತಿಯ ಪ್ರತಿರೂಪ. ನಾವು ಜೀವಿಸುತ್ತಿರುವ ಈ ಮರ್ತ್ಯಲೋಕಕ್ಕೂ ಮುಕ್ತಿಲೋಕಕ್ಕೂ ಇರುವ ಏಕೈಕ ಕೊಂಡಿ – ಮೆಟ್ಟಿಲೆಂದರೆ ''**ಭಗವನ್ನಾಮ.**''

### ವಚನ ನಾಮಾಮೃತ

ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ
ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ನೆನಹು ತುಂಬಿ
ಕೂಡಲಸಂಗಮದೇವಾ, ನಿಮ್ಮ ಚರಣಕಮಲದೊಳಗಾನು ತುಂಬಿ!

*–ಬಸವಣ್ಣ*

# ದಾಸ ಸಾಹಿತ್ಯದಲ್ಲಿ ಸ್ಮರಣ ಭಕ್ತಿ

**ಡಾ. ಟಿ.ಎಸ್.ನಾಗರತ್ನ**



**ಕರ್ನಾಟಕದಲ್ಲಿ ಭಕ್ತಿಪರಂಪರೆಯನ್ನು ಉಚ್ಚ್ರಾಯ ಸ್ಥಿತಿಗೆ ಕೊಂಡೊಯ್ದ ಮಹನೀಯರಲ್ಲಿ ಹರಿದಾಸರ ಕೊಡುಗೆ ವಿಶಿಷ್ಟವಾದದ್ದು. ಹರಿದಾಸ ಪರಂಪರೆ ಭಗವಂತನ ನಾಮವನ್ನು ಜನರ ಮನೆಮನೆಗೂ ತಲುಪಿಸಿ, ಸಾಮಾನ್ಯರ ಹೃದಯದಲ್ಲೂ ಭಗವಂತನಲ್ಲಿ ಅಭಿರುಚಿ ಮೂಡಿಸುವ ಮಹತ್ಕಾರ್ಯವನ್ನು ಮಾಡಿದ ಬಗೆಯನ್ನು ವಿವರಿಸುವ ಲೇಖಕಿ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹರಿದಾಸ ಸಾಹಿತ್ಯ ವಿಭಾಗದ ಮುಖ್ಯಸ್ಥರಾಗಿ ನಿವೃತ್ತಿ ಹೊಂದಿದ್ದು, ದಾಸ ಸಾಹಿತ್ಯದಲ್ಲಿ ಆಳವಾದ ಅಧ್ಯಯನ ಮಾಡಿದ್ದಾರೆ.**

**ಸು**ಮಾರು ೫೦೦೦ ವರ್ಷಗಳಿಗೂ ಹಿಂದಿನ ಇತಿಹಾಸವಿರುವ ಭಕ್ತಿಯ ಪರಿಕಲ್ಪನೆ ಸಿಂಧೂ ನಾಗರಿಕತೆಯ ಸಂಶೋಧನೆಯಿಂದ ವ್ಯಕ್ತವಾಗಿದ್ದು, ಅಲ್ಲಿ ದೇವರೂ ದೇವಾಲಯಗಳೂ ಅಸ್ತಿತ್ವದಲ್ಲಿದ್ದಿರಬೇಕೆಂಬ ನಂಬಿಕೆಗೆ ಇಂಬುಗೊಡುತ್ತದೆ. ಆ ಸಮಯದಲ್ಲಿ ಮೂರ್ತಿಪೂಜೆ ಮಾಡುವಷ್ಟು ಬೆಳೆದಿರಬೇಕಾದರೆ ಭಕ್ತಿಭಾವದ ಸಂಚಾರ ಜನಮನದಲ್ಲಿ ಇನ್ನೂ ಹಿಂದೆಯೇ ಆಗಿರಬೇಕು. ಪ್ರಕೃತಿಯ ವೈಚಿತ್ರ್ಯಗಳು, ಭೀಕರತೆಗಳನ್ನು ಕಂಡ ಆದಿಮಾನವ ಭಯಪಟ್ಟಿರಬೇಕು. ಅಂತೆಯೇ ಆಕೆಯ ಮೃದುಮಧುರ ಲಾಸ್ಯವನ್ನು ಕಂಡು, ಸೌಂದರ್ಯವನ್ನನುಭವಿಸಿ, ತಂಗಾಳಿ ಹಕ್ಕಿಗಳ ಇಂಚರಗಳಿಗೆ ಮನಸೋತು ಸಂತೋಷಪಟ್ಟು, ಅವೆಲ್ಲವುಗಳ ಒಂದು ಲಯಬದ್ಧ ಹೊಂದಾಣಿಕೆಗೆ ಆಶ್ಚರ್ಯಪಟ್ಟಿರಲೂ ಸಾಕು – ಈ ಎಲ್ಲ ಮಾನಸಿಕ ತುಮುಲಗಳ ಫಲವಾಗಿ ಭಕ್ತಿಭಾವ ಉದಯಿಸಿತೆನ್ನಬೇಕು. ಹೀಗೆ ಆವಿರ್ಭವಿಸಿದ ಭಕ್ತಿಭಾವ ವೇದೋಪನಿಷತ್ತುಗಳಲ್ಲಿ ಮೈದುಂಬಿ, ಸೂತ್ರಗಳ ಕಾಲದಲ್ಲಿ ವಿಕಸಿಸಿ ಭಗವದ್ಗೀತೆಯಲ್ಲಿ ಓತಪ್ರೋತವಾಗಿ ಪ್ರವಹಿಸಿದೆ.

ಭಕ್ತಿಯ ಅನುಭವ ಒಂದೇ ಆದರೂ ಅಭಿವ್ಯಕ್ತಿಯಲ್ಲಿ ವೈವಿಧ್ಯವಿರುವುದನ್ನು ಕಾಣಬಹುದು. '**ನಾರದ ಭಕ್ತಿ ಸೂತ್ರ**' ಮತ್ತು '**ಶಾಂಡಿಲ್ಯ ಸೂತ್ರ**'ಗಳು ಭಕ್ತಿಯ ಸ್ವರೂಪದ ಬಗ್ಗೆ ವಿಶ್ಲೇಷಣೆ ನಡೆಸಿವೆ. ಅವುಗಳ ಪ್ರಕಾರ 'ಭಕ್ತಿ'ಎಂದರೆ ಯಾರೊಬ್ಬರ ಬಗೆಗಿರುವ ಪರಮ ಪ್ರೀತಿ. ಅದು ಭಗವಂತನೆಡೆಗೆ ಹರಿದಾಗ ಭಗವದ್ಭಕ್ತಿಯೆನ್ನಿಸಿಕೊಳ್ಳುತ್ತದೆ – ಈಶ್ವರ ನಲ್ಲಿ ಪರಮ ಪ್ರೀತಿಯನ್ನಿಡುವುದೇ ಭಕ್ತಿ.

'ನಾರದ ಭಕ್ತಿಸೂತ್ರ'ದಲ್ಲಿ ಭಕ್ತಿಯನ್ನು ಗುಣಮಾಹಾತ್ಮ್ಯಾಸಕ್ತಿ, ರೂಪಾಸಕ್ತಿ, ಪೂಜಾಸಕ್ತಿ, ಸ್ಮರಣಾಸಕ್ತಿ ಹೀಗೆ ಹನ್ನೊಂದು ಆಸಕ್ತಿಗಳೆಂದು ವಿಭಾಗಿಸಿ ವಿವೇಚಿಸಲಾಗಿದೆ. ಅಂದರೆ ಭಗವಂತನಲ್ಲಿ ಆಸಕ್ತರಾದವರು ಈ ಮೇಲಿನ ಯಾವ ರೀತಿಯಿಂದಲಾದರೂ ಸಾಧನೆ ಮಾಡಬಹುದು. ಹಾಗೆಯೇ ಭಾಗವತದಲ್ಲಿ ಶ್ರವಣ, ಕೀರ್ತನ, ಸ್ಮರಣವೇ ಮೊದಲಾದ ಒಂಬತ್ತು ವಿಧವಾದ ಭಕ್ತಿಗಳನ್ನು ಹೆಸರಿಸಿ,

**ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ।**
**ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಂ ॥**

ಅವುಗಳ ಮೂಲಕ ಭಕ್ತ ತನ್ನ ಸಾಧನೆಯ ಮಾರ್ಗದಲ್ಲಿ ಮುಂದುವರಿಯಬಹುದೆಂಬದನ್ನು ಸೂಚಿಸಿದೆ. ಈ ಎರಡೂ ಗ್ರಂಥಗಳಲ್ಲಿ ಹೇಳಿರುವ ಭಕ್ತಿಯ ಬಗೆಗಳಲ್ಲಿ ಸ್ಮರಣಭಕ್ತಿಯೂ ಒಂದು. ಭಗವಂತನಿಗೆ ಸಂಬಂಧಿಸಿದ ವಿಷಯಗಳನ್ನು ಶ್ರದ್ಧೆಯಿಂದ ಕೇಳಿ ('ಶ್ರವಣಭಕ್ತಿ'), ಅವನ ಅನಂತ ಗುಣರೂಪಾದಿಗಳನ್ನು ಸ್ತುತಿಸಿ, ('ಕೀರ್ತನಭಕ್ತಿ'), ಆ ಮೂಲಕ ಸಂಗ್ರಹಿಸಿದ ಭಗವನ್ನಾಮ ರೂಪಗುಣಾದಿಗಳನ್ನು **ಮತ್ತೆ ಮತ್ತೆ ನೆನೆಯುವುದು ಸ್ಮರಣಭಕ್ತಿ**. ಸ್ಮರಣಭಕ್ತಿಯಲ್ಲಿ ನಾಮಸ್ಮರಣೆಗೆ ವಿಶೇಷಸ್ಥಾನವಿದೆ. ಭಗವನ್ನಾಮಸ್ಮರಣೆಯನ್ನು ಇಂತಹ ಸ್ಥಳದಲ್ಲೇ ಇಂತಹ ಕಾಲದಲ್ಲೇ ಮಾಡಬೇಕೆಂಬ ನಿಯಮಗಳಿಲ್ಲ. ನಡೆವಾಗ, ನುಡಿವಾಗ, ಬಿಕ್ಕುವಾಗ, ಆಕಳಿಸುವಾಗ, ಉಂಡುಟ್ಟು ಸುಖಪಡುವಾಗ, ಕಷ್ಟದಿಂದ ಕಂಗೆಟ್ಟಾಗ – ಯಾವಾಗ ಯಾರು ಎಲ್ಲಿ ಬೇಕಾದರೂ ಹರಿನಾಮಸ್ಮರಣೆ ಮಾಡಬಹುದು; ಫಲವನ್ನು ಪಡೆಯಬಹುದು.

ಹರಿದಾಸರಿಗಂತೂ ಹರಿನಾಮಸ್ಮರಣೆ ಮಧುವಿಗಿಂತಲೂ ಮಧುರ. ಶ್ರೀಪಾದರಾಜರು ಸ್ಮರಣಭಕ್ತಿಯನ್ನು ಕುರಿತು ಒಂದು ಸೊಗಸಾದ ಉಗಾಭೋಗವನ್ನೇ ರಚಿಸಿಬಿಟ್ಟಿದ್ದಾರೆ : **ಮನೆಯಿಂದ ಸಂತೋಷ ಕೆಲವರಿಗೆ ಲೋಕದೊಳು**
**ಧನದಿಂದ ಸಂತೋಷ ಕೆಲವರಿಗೆ ಲೋಕದೊಳು**